'ನೀನು ಬರೀ ಆರಾಧ್ಯನೋ ಅಥವಾ ನಿನ್ನ ಹೆಸರಿನ ಮೊದಲು ಯಾವುದಾದರೂ ದೇವರ ಹೆಸರಿದೆಯೋ? ಮರಿ... ಅಕ್ಕ, ಗಾಂಧಿ ಎಲ್ಲರೂ ಬೆತ್ತಲಾಗಿದ್ದಾರೆ, ಬೆತ್ತಲಾಗುವುದೆಂದರೆ ಚಡ್ಡಿ ಬಿಚ್ಚಿ ಸಾಮಾನನ್ನು ಕೈಯಲ್ಲಿ ಹಿಡಿದು ಮೆಸ್ಸಿಗೆ ಊಟಕ್ಕೆ ಬಂದವರಿಗೆಲ್ಲ ತೋರಿಸಿ ತೋರಿಸಿ ಹಾಜರಿ ತೆಗೆದುಕೊಳ್ಳುವುದಲ್ಲ' ಎಂದಿದ್ದು ಮತ್ತೆ ಆರಾಧ್ಯನಿಗೆ ನೆನಪಾಯಿತು.

★★★

ಪಾಸಾಗುವ ಎಲ್ಲ ಅರ್ಹತೆ ಇದ್ದರೂ ಬೇಕಂತಲೇ ಹಿಂದಿನ ಸೆಮಿಸ್ಟರಿನಲ್ಲಿ ಉಳಿಸಿಕೊಂಡ ಎರಡು ವಿಷಯಗಳ ಸಪ್ಲಿಮೆಂಟರಿ ಪರೀಕ್ಷೆ ಇಂದೇ ಮಧ್ಯಾಹ್ನ ಇದ್ದರೂ, 'ಓದಿಕೊಳ್ಳುವುದು ಬಹಳ ಇದೆ, ಸರ್ ನಿನ್ನೆ ಸರಿಯಾಗಿ ನಿದ್ರೆ ಮಾಡಿಲ್ಲ' ಎಂದು ಬಶೀರ ಗೋಗರೆದರೂ ಆರನೇ ಸೆಮಿಸ್ಟರ್ ನೋಡಿಕೊಳ್ಳುವ ಸೆಂದಿಲ್ ಸರ್ ಒಂದಿಷ್ಟೂ ತಲೆಗೆ ಹಾಕಿಕೊಳ್ಳದೇ ತನ್ನ ಒಂದೇ ಕೈಯಲ್ಲಿ ಬಶೀರನನ್ನು ತಳ್ಳುತ್ತಾ ಎಚ್.ಓ.ಡಿ. ರೂಮಿನ ಪಕ್ಕಕ್ಕೇ ಇರುವ ಮುಖ್ಯ ದ್ವಾರಕ್ಕೆ ತಂದು ನಿಲ್ಲಿಸಿದರು. ಸೆಂದಿಲ್ ಸರ್ ಬಶೀರನನ್ನು ಒಂದೇ ಸಮನೆ ತಳ್ಳುತ್ತಿದ್ದಂತೆ ಆತ ಹಾಕಿಕೊಂಡ ಇಂಡಸ್ಟ್ರಿಯಲ್ ಶೂ ರಾಸಾಯನಿಕ ಬಣ್ಣ ಹಚ್ಚಿದ್ದ ನೆಲದೊಡನೆ ಸೇರಿ ವಿಚಿತ್ರವಾದ ಶಬ್ದ ಮಾಡುತ್ತಿತ್ತು. ಸರ್ ಇಂದು ತಳ್ಳುವ ಭರವನ್ನು ಗಮನಿಸಿದ ಎಲ್ಲರಿಗೂ ಒಂದು ಮಾತ್ರ ಖಾತ್ರಿಯಾಗಿತ್ತು. ಇಂದು ಸಂಜೆಯವರೆಗೆ ಬಶೀರನನ್ನು ಎಚ್.ಓ.ಡಿ. ರೂಮಿನೆದುರು ನಿಲ್ಲಿಸುವುದು ಖಂಡಿತ. ಮತ್ತೆ ಇಂದು ಆ ಎರಡು ಪರೀಕ್ಷೆಗೆ ಕೂರುವುದಂತೂ ಸಾಧ್ಯವಿಲ್ಲ ಎಂದು.

ಇಷ್ಟಕ್ಕೂ ಬಶೀರ ಮಾಡಿದ ತಪ್ಪಾದರೂ ಏನು ಎಂದು ಕೇಳಿದರೆ ಅಂತಹದ್ದೇನೂ ಇರಲಿಲ್ಲ. ಮೂರನೇ ಬಾರಿ ಸೆಂದಿಲ್ ಸರ್ ಕ್ಲಾಸಿಗೆ ತಡವಾಗಿ ಬಂದು ಪಕ್ಕದಲ್ಲಿ ಕೂತವರಿಗೇನೋ ತೊಂದರೆಯನ್ನು ಕೊಡುತ್ತಿದ್ದ ಅಷ್ಟೇ. ದಯೆ, ಕರುಣೆ, ಕ್ಷಮೆ ಇತ್ಯಾದಿ ಯಾರಿಗಾದರೂ ಉಪಯೋಗಿಸಿಯೇನು, ಆದರೆ ಈ ಬೋಳಿಮಗನಿಗೆ... ದೇವರಾಣೆ ಸಾಧ್ಯವಿಲ್ಲ ಎಂದು ಕಿರು ಬೆರಳಲ್ಲಿ ಉದ್ದ ಉಗುರು ಬೆಳೆಸಿದ್ದ ಸರ್ ಮೂರನೇ ಸೆಮಿಸ್ಟರಿನಲ್ಲೇ ಬಹಿರಂಗವಾಗಿ ಈ ಶಬ್ದ ಉಪಯೋಗಿಸಿ ಮೇಲಿನವರಿಂದ ಮೆಮೊ ಪಡೆದದ್ದೂ ಆಗಿತ್ತು.

ಸೆಂದಿಲ್ ಸರ್ ಶಿಕ್ಷೆಯ ವಿಧಾನ ಇಷ್ಟೆ. ಪ್ರಾಕ್ಟಿಕಲ್ ವರ್ಕ್‌ಶಾಪ್‌ನಲ್ಲಿ ಯಾವುದಾದರೂ ವಿದ್ಯಾರ್ಥಿ ತಪ್ಪು ಮಾಡಿದರೆ ಆತ ಎರಡು ಕೇಜಿ ಕಬ್ಬಿಣದ ಬ್ಲಾಕ್‌ಗಳನ್ನು ತನ್ನೆರಡು ಕೈಗಳಲ್ಲಿ ಪರ್ವತ ಹೊತ್ತ ಆಂಜನೇಯನಂತೆ ಹಿಡಿದುಕೊಂಡು ಟ್ರೈನಿಂಗ್ ಮ್ಯಾನೇಜರ್ ಕೊಠಡಿಯ ಮುಂದೆ ನಿಲ್ಲುವುದು. ಬೆಳಗಿನಿಂದ ಬಂದು ಹೋಗುವವರೆಲ್ಲ ಏನಾಯಿತು, ಏನಾಯಿತು ಎಂದು ಕೇಳುವುದು. ಅದಕ್ಕೆ ಶಿಕ್ಷೆ ಅನುಭವಿಸುವವರು ಉತ್ತರ ಕೊಡಬೇಕು. ಬೆಳಗಿನಿಂದ ಉಳಿದ ಬ್ಯಾಚಿನವರು ಹಾದು ಹೋಗುವಾಗ ಕಣ್ ಸನ್ನೆಯಲ್ಲೇ ಏನಾಯಿತು ಎಂದು ಬಶೀರನ ಹತ್ತಿರ ಕೇಳಿದ್ದಕ್ಕೆ ಕಿಕ್ ಕಿಕ್ ಕಿಕ್ ಎಂದು ನಕ್ಕು ಎಲ್ಲರಿಗೆ ಮಜ ಕೊಡುತ್ತಿದ್ದ. ಅದನ್ನು ನೋಡುತ್ತಿದ್ದ ಸರ್, ಹೀಗೆ ಮೊದಲಿನ ಹಾಗೆ ನಕ್ಕರೆ ಇನ್ನೆರಡು ಕೇಜಿ ಹೆಚ್ಚಿಸುತ್ತೇನೆ ಎಂದು ತನ್ನ ನೆಚ್ಚಿನ ವಿದ್ಯಾರ್ಥಿಯಲ್ಲಿ ಹೇಳಿ ಕಳಿಸಿದರು. ಅದಕ್ಕೂ ಬಶೀರನ ಉತ್ತರ ಕಿಕ್ ಕಿಕ್ ಕಿಕ್ ಎಂದಾಗಿತ್ತು.

ಸುಮಾರು ಮಧ್ಯಾಹ್ನ ಒಂದೂವರೆಗೆ ಸರ್ ಊಟಕ್ಕೆ ಹೋಗುವಾಗ ಬಶೀರನ ಹತ್ತಿರ ಬಂದು 'ಹೆಚ್ಚು ನಾಟಕ ಬೇಡ. ನನ್ನ ಒಂದು ಕಣ್ಣನ್ನು ಇಲ್ಲೇ ಇಟ್ಟು ಹೋಗುತ್ತೇನೆ' ಎಂದು ಎಚ್ಚರಿಕೆ ಕೊಟ್ಟರು. 'ಆಯಿತು ಸರ್, ನಾನು ಜೋಪಾನವಾಗಿ ನೋಡಿಕೊಳ್ಳುತ್ತೇನೆ' ಎಂಬ ಉತ್ತರ ಬಶೀರನ ಬಾಯಿ ತುದಿಗೆ ಬಂದಿತ್ತು. ಆದರೆ ಹಾಗೆ ಹೇಳಿದರೆ ಇನ್ನೂ ಎಡವಟ್ಟಾದೀತು, ನಾಳೆನೂ ಈ ಹನುಮಂತನ ಪಾತ್ರ ಕಷ್ಟ ಎಂದು ಸರ್ ಮುಂದೆ ಸರ್ವಥಾ ಪಾಲಿಸುತ್ತೇನೆ ಎನ್ನುವ ಮುಖ ಚರ್ಯೆ ತೋರಿಸಿದ.